

# ತ್ರಿಶೂಲ ಪರ್ವತಕ್ಕೊಂದು ಕನ್ನಡಿ

# ಕೌಸಾನಿ

**ಭಾರತದ ‘ಸ್ವಿಟ್ಜರ್‌ಲೆಂಡ್’ ಎಂದೇ ಪ್ರತೀತಿ ಹೊಂದಿರುವ ಕೌಸಾನಿ ಎಂಬ ಪುಟ್ಟ ಹಳ್ಳಿ ಹಿಮಾಲಯದ ಅಪೂರ್ವ ನೋಟವನ್ನು ಕರುಣಿಸುವ ತಾಣ. ಹಿಮಾಲಯದ ಉತ್ತುಂಗ ಶಿಖರಗಳಾದ ತ್ರಿಶೂಲ, ನಂದಾದೇವಿ ಮತ್ತು ಪಾಂಚೌಲಿ ಪರ್ವತಾವಳಿಗಳ ವಿಹಂಗಮ ನೋಟ ಅನುಭವಿಸಬೇಕೆಂದರೆ ಕೌಸಾನಿಗೆ ಬರಲೇಬೇಕು.**

**■ ಜಿ.ಆರ್. ಪಂಡಿತ್**

ಹಿಮಾಲಯದ ಅಪೂರ್ವ ದೃಶ್ಯ ಸೌಂದರ್ಯವನ್ನು ತನ್ನಲ್ಲಿರಿಸಿಕೊಂಡ ಸುಂದರವಾದ ‘ಕೌಸಾನಿ’ ಎಂಬ ಪುಟ್ಟ ಹಳ್ಳಿ, ಉತ್ತರಾಖಂಡದ ಭಾಗೇಶ್ವರ ಜಿಲ್ಲೆಯಲ್ಲಿದೆ. ಸಮುದ್ರಮಟ್ಟದಿಂದ ಸುಮಾರು 6200 ಅಡಿ, ಅಂದರೆ 1890 ಮೀಟರ್ ಎತ್ತರದಲ್ಲಿರುವ ಈ ಊರು ಭಾರತದ ‘ಸ್ವಿಟ್ಜರ್‌ಲೆಂಡ್’ ಎಂದೇ ಪ್ರತೀತಿ.

ಹಿಮಾಲಯದ ಉತ್ತುಂಗ ಶಿಖರಗಳಾದ ತ್ರಿಶೂಲ, ನಂದಾದೇವಿ ಮತ್ತು ಪಾಂಚೌಲಿ ಪರ್ವತಾವಳಿಗಳ ವಿಹಂಗಮ ನೋಟವನ್ನು ಅನುಭವಿಸಬೇಕೆಂದರೆ ಕೌಸಾನಿಗೆ ಬರಲೇಬೇಕು. ಇಲ್ಲಿಗೆ ಬರುವ ಪ್ರವಾಸಿಗರಿಗೆ ಮುಖ್ಯ ಆಕರ್ಷಣೆಯೇ ಈ ‘ತ್ರಿಶೂಲ ಪರ್ವತ’. ಈ ಮೂರು ಪರ್ವತ ಶಿಖರಗಳು ಶಿವನ ಆಯುಧ ತ್ರಿಶೂಲದ ಆಕಾರದಲ್ಲಿ ಒಡಮೂಡುವ ಕಾರಣಕ್ಕೆ ಈ ಹೆಸರು ಬಂದಿದೆ.

ಹಿಮಚ್ಛಾದಿತ ತ್ರಿಶೂಲ ಪರ್ವತದ ಮೇಲೆ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಂಭ್ರಮ ನೋಡುವುದೇ ಕೌತುಕದ ಸಂಗತಿ. ಬೆಳಗಿನ ಮೊದಲ ರವಿಕಿರಣ ಒಂದೊಂದೇ ಶಿಖರಗಳ ಮೇಲೆ ಬೀಳುತ್ತಾ ಹೋದಂತೆ, ಕೆಂಬಣ್ಣದಿಂದ ಹೊಳೆವ ತ್ರಿಶೂಲದ ದರ್ಶನವಾಗುತ್ತದೆ. ಶಿವ ಸಾಕ್ಷಾತ್ಕಾರವಾದಂತೆ ಮೈಮನ ಪುಳಕಿತಗೊಳ್ಳುತ್ತದೆ. ಹಿಮ ತುಂಬಿದ ಬೆಟ್ಟಗಳ ಮೇಲೆ ಹತ್ತಿಯ ರಾಶಿಯಂತೆ ಆಗಾಗ ತುಂಬಿಕೊಳ್ಳುವ ಬಿಳಿ ಮೋಡಗಳು, ಮಂಜಿನ ಮಧ್ಯೆ ತೂರಿಬರುವ ರವಿಕಿರಣಗಳು, ಕೆಳಗೆ ಹಸುರು ಹೊದ್ದ ನೆಲ, ಹೂಹೊಲ ಎಲ್ಲವೂ ಮಾಯಾಲೋಕವನ್ನೇ ಭೂಮಿಗಿಳಿಸಿಬಿಡುತ್ತವೆ. ಕ್ಷಣಕ್ಷಣವೂ ತನ್ನ ಸ್ವರೂಪವನ್ನು ಬದಲಿಸುತ್ತಲೇ ಇರುವ ಪ್ರಕೃತಿಯ ವರ್ಣನೆ ಶಬ್ದಾತೀತ.

ಮೊದಲನೇ ಶಿಖರ ಸಮುದ್ರಮಟ್ಟದಿಂದ 23,395 ಅಡಿ ಎತ್ತರದಲ್ಲಿದೆ. ಟಿ.ಜಿ. ಲಾಂಗ್‌ಸ್ಟಾಫ್ ಎಂಬ ಬ್ರಿಟಿಷ್ ಪರ್ವತಾರೋಹಿ 1907ರಲ್ಲಿ ಮೊಟ್ಟ ಮೊದಲು ಈ ಪರ್ವತವನ್ನೇರಿ ದಾಖಲೆ ಮಾಡಿದ್ದಾನೆ. ತ್ರಿಶೂಲ ಪರ್ವತದ ಎರಡು ಮತ್ತು ಮೂರನೇ ಶಿಖರಗಳನ್ನು ಯುಗೋಸ್ಲಾವಿಯಾ ತಂಡ ಕ್ರಮವಾಗಿ 1960 ಮತ್ತು 1987ರಲ್ಲಿ ಆರೋಹಣ ನಡೆಸಿ ಸಫಲವಾಗಿವೆ.

ಕೌಸಾನಿಗೆ ಬಂದವರು ಈ ತ್ರಿಶೂಲ ಪರ್ವತದ ಜೊತೆಗೆ ಇನ್ನೂ ಅನೇಕ ಪ್ರವಾಸಿ ತಾಣಗಳನ್ನು ವೀಕ್ಷಿಸಬಹುದು. ತನ್ನ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರಾದ ಅಲ್ಮೋರಾ ಕೇವಲ 53 ಕಿ.ಮೀ. ಅಂತರದಲ್ಲಿದೆ. ಬೈಜನಾಥ ದೇವಾಲಯ, ಬಧಾನ್ ಘಡೀ ಮಂದಿರ, ಕೋಟೆ ಮಾಯಿ ಮಂದಿರ, ರುದ್ರಧಾರೀ ಧಾಮ, ಅನಾಸಕ್ತಿ ಆಶ್ರಮ, ಗ್ವಾಲ್ ಧಾಮ್ ಪ್ರೇಕ್ಷಣೀಯ ಸ್ಥಳಗಳು ಕೇವಲ 510 ಕಿ.ಮೀ. ಅಂತರದಲ್ಲಿ ನೋಡಲು ಸಿಗುತ್ತವೆ.

ಅನಾಸಕ್ತಿ ಆಶ್ರಮ ಮಹಾತ್ಮ ಗಾಂಧೀಜಿಯವರು 1929ರಲ್ಲಿ ಎರಡು ವಾರಗಳ ಕಾಲ ಕೌಸಾನಿಯಲ್ಲಿ ತಂಗಿದ್ದುದರ ನೆನಪಿಗಾಗಿ ನಿರ್ಮಾಣಗೊಂಡ ಭವನ. ಗಾಂಧೀಜಿಯವರು ತಮ್ಮ ಪುಸ್ತಕ ‘ಅನಾಸಕ್ತಿ ಯೋಗ’ವನ್ನು ಇಲ್ಲಿಯೇ ಕುಳಿತು ರಚಿಸಿದ್ದಾರೆ. ಈ ಸಮುಚ್ಚಯದಲ್ಲಿ ಪ್ರಾರ್ಥನಾ ಮಂದಿರ, ಸರಳಾ ಬೆನ್ ಮತ್ತು ಲಕ್ಷ್ಮಿ ಬೆನ್ ನೆನಪಿನ ವಸ್ತು ಸಂಗ್ರಹಾಲಯವೂ ಇದೆ.

1947ರಲ್ಲಿ ಉತ್ತರ ಪ್ರದೇಶದ ಅಲ್ಮೋರಾ ಜಿಲ್ಲೆಯ ಭಾಗವಾಗಿದ್ದ ಕೌಸಾನಿ, ಸೆಪ್ಟೆಂಬರ್ 2000ರಲ್ಲಿ, ಉತ್ತರಾಖಂಡ ರಾಜ್ಯದ ಉಗಮವಾದಾಗ ಭಾಗೇಶ್ವರ್ ಜಿಲ್ಲೆಗೆ ಸೇರಿತು. ಕೇವಲ 430 ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡ, 500ರಿಂದ 600 ಕುಟುಂಬಗಳಷ್ಟೇ ವಾಸಿಸುವ, 5000ಕ್ಕೂ ಕಡಿಮೆ ಜನಸಂಖ್ಯೆ ಹೊಂದಿರುವ ಪಂಚಾಯತ್ ಮಟ್ಟದ ಗ್ರಾಮವೊಂದು ಪ್ರತಿ ವರ್ಷ ಅದೆಷ್ಟೋ ಲಕ್ಷ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ.

ಇಲ್ಲಿನ ಹೆಚ್ಚಿನ ಯುವಕರು ಭಾರತೀಯ ಸೇನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಉಳಿದವರು ಕೃಷಿ, ಪ್ರವಾಸೋದ್ಯಮವಲ್ಲದೆ ಮತ್ತಿತರ ಸಣ್ಣ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದಾರೆ.

ಕೌಸಾನಿ ತಲುಪಲು ಹತ್ತಿರದ ವಿಮಾನ ನಿಲ್ದಾಣವೆಂದರೆ ಪಂಥನಗರ್ ವಿಮಾನ ನಿಲ್ದಾಣ. ಅಲ್ಲಿಂದ 178 ಕಿ.ಮೀ. ಟ್ಯಾಕ್ಸಿ ಮೂಲಕ ಬರಬಹುದು ಅಥವಾ ಟ್ರೇನ್ ಮೂಲಕ ದೆಹಲಿಯಿಂದ ಕಾಟ್ ಗೋಡಾಮ್‌ವರೆಗೆ ಪ್ರಯಾಣಿಸಿ ಅಲ್ಲಿಂದ 145 ಕಿ.ಮೀ. ಟ್ಯಾಕ್ಸಿ ಮೂಲಕ ತಲುಪಬಹುದು.

ಪ್ರಕೃತಿಪ್ರಿಯರಿಗೆ, ಸಾಹಸಿಗಳಿಗೆ ಇದು ಸುಂದರ ತಾಣ. ■